**ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

ಸ್ಪೆಷಲ್ ಕೇಸ್ ನಂಃ **78/2018**

ಚಾಸಾಃ **2** ಅಸಾಃ **2**

| | |
|---|---|
| ಹೆಸರು: | ಅಶ್ವಿನಿ |
| ತಂದೆಯ / ಗಂಡನ ಹೆಸರು: | ತಿಮ್ಮಯ್ಯ |
| ವಯಸ್ಸು: | 25 ವರ್ಷ |
| ಕೆಲಸಃ | ಶಿಕ್ಷಕಿ |
| ವಾಸಸ್ಥಳ: | ಮೆರ್ವೆ ಗ್ರಾಮ, ಆಲೂರು ತಾಲ್ಲೂಕು |

ದಿನಾಂಕಃ **21/07/2023** ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಸ್‌ಪಿಪಿ ರವರಿಂದ ಃ

ಆರೋಪಿ ನನಗೆ ಗೊತ್ತು. ಅವರು ಭಕ್ತರವಳ್ಳಿ ಗ್ರಾಮದವರು. ಆರೋಪಿ ಒಕ್ಕಲಿಗ ಜಾತಿಗೆ ಸೇರಿದವರಿರುತ್ತಾರೆ. ನಾನು ಆದಿ ಕರ್ನಾಟಕ ಪರಿಶಿಷ್ಟ ಜಾತಿಯ ಸದಸ್ಯಳಿರುತ್ತೇನೆ. ಚಾಸಾ–1 ನನ್ನ ತಂದೆ. ಉಳಿದ ಸಾಕ್ಷಿದಾರರು ಗೊತ್ತು. ಚಾಸಾ–3 ತೀರಿ 2 ವರ್ಷವಾಗಿರುತ್ತದೆ. ನಾನು ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದೇನೆ. 2017 ರಲ್ಲಿ ನಾನು ಪಧವೀಯ ಕೊನೆ ವರ್ಷವನ್ನು ಆಲೂರು ಸರ್ಕಾರಿ ಕಾಲೇಜಿನಲ್ಲಿ ಓದುತ್ತಿದ್ದೆ. ನಾನು ದಿನಾಲು ಕಾಲೇಜಿಗೆ ಬಸ್ಸು ಮುಖಾಂತರ ಹೋಗಿ ಬರುತ್ತಿದ್ದೆ ಬಸ್ಸನ್ನು ನಮ್ಮ ಊರಿನಿಂದ ನಡೆದು ಹೋಗಿ ಹೊನ್ನೇನಹಳ್ಳಿ ಕ್ರಾಸ್‌ನಲ್ಲಿ ಹತ್ತುತ್ತಿದ್ದೆ. ನಾನು ಮನೆಯನ್ನು ಬೆಳಿಗ್ಗೆ 7.30 ಕ್ಕೆ ಬಿಡುತ್ತಿದ್ದೆ. ಮನೆಗೆ ಕಾಲೇಜು ಮುಗಿದ ಮೇಲೆ ಮಧ್ಯಾಹ್ನ 3.00 ರಿಂದ 5.00 ಗಂಟೆಯೊಳಗೆ ವಾಪಸ್ಸು ಮನೆಗೆ ಬರುತ್ತಿದ್ದೆ.

2. 12.10.2017 ರಂದು ಸಂಜೆ 4.45 ಗಂಟೆಗೆ ನಾನು ಹೊನ್ನೇನಹಳ್ಳಿ ಕ್ರಾಸಗೆ ಬಸ್ಸಿನಿಂದ ಇಳಿದೆ. ಸದರಿ ಕ್ರಾಸಿನಿಂದ ನಮ್ಮ ಮನೆ ಎರಡೂವರೆ ಕಿ.ಮೀ ಅಂತರವಿದೆ. ನಾನು ಮತ್ತು ಚಾಸಾ–4 ಎಡವನಹಳ್ಳಿ ಕ್ರಾಸ್‌ಗೆ ನಡೆಯುತ್ತಾ ಹೊರಟೆವು. ನಾವು ಅಶೋಕ ಎನ್ನುವವರ ಜಮೀನು ಹತ್ತಿರ ಬಂದೆವು ಚಾಸಾ–4 ಅವರ ಮನೆಗೆ ಹೋದರು. ನಾನು ಒಬ್ಬಳೆ ನಡೆಯುತ್ತಾ ಹೋದಾಗ, ಆರೋಪಿ ಅಭಿಲಾಷ್ ನನ್ನ ಹಿಂದೆ ಬೈಕ್‌ನಲ್ಲಿ ಬಂದರು.

3. ಆರೋಪಿ ನನ್ನನ್ನು ಅಡ್ಡಗಟ್ಟಿ ತಡೆದು,ಕೈ ಹಿಡಿದು ಎಳೆದು ಕುತ್ತಿಗೆ ಹಿಸುಕಿ ತೋಟದ ಪೊದೆ ಒಳಗೆ ಆರೋಪಿ ಎಳೆದುಕೊಂಡು ಹೋದ. ನಾನು ಕಿರುಚಾಡಿದೆ. ನನ್ನ ಕಾಲೇಜು ಬ್ಯಾಗ್ ರಸ್ತೆಯಲ್ಲಿ ಬಿದ್ದಿತ್ತು. ಅಜ್ಜ ಯಾರು ಅಂತಾ ಕೇಳಿದ ಕೂಡಲೇ ನಾನು ಕಿರುಚಿದೆ. ನನ್ನ ಕಿರುಚಿದ ಶಬ್ದವನ್ನು ಕೇಳಿ ಯಾರು ಯಾರು ಅಂತಾ ಕೇಳಿದರು. ಆರೋಪಿ ಇನ್ನೊಮ್ಮೆ ಸಿಕ್ತಿಯಾ ಹೊಲೆಯ ಮುಂಡೇರಾ ಅಂತಾ ಬೈದು ಬೈಕನ್ನು ಅಲ್ಲಿಯೇ ಬಿಟ್ಟು ಓಡಿ ಹೋದ. ಆರೋಪಿ ನನ್ನ ಮೇಲೆ ಅತ್ಯಾಚಾರ ಮಾಡುವ ಉದ್ದೇಶದಿಂದ ಈ ರೀತಿ ಮಾಡಿರುತ್ತಾನೆ.

4. ನನಗೆ ಈ ಘಟನೆಯಲ್ಲಿ ಕುತ್ತಿಗೆ ನೋವಾಗಿತ್ತು ಮತ್ತು ಕಾಲು ಪೆಟ್ಟಾಗಿತ್ತು. ( ಸಾಕ್ಷಿ ಘಟನೆಯ ವಿಷಯವನ್ನು ಅಳುತ್ತಾ ಹೇಳಿದರು) ಚಾಸಾ–3 ನನ್ನನ್ನು ಅವರ ಮನೆಗೆ ಕರೆದುಕೊಂಡು ಹೋದರು. ಚಾಸಾ3 ದನಗಳನ್ನು ಹೊಡೆದುಕೊಂಡು ಹೋಗುತ್ತಿದ್ದರು. ಚಾಸಾ–4 ಚಾಸಾ–3 ರವರ ಮೊಮ್ಮಗಳಿರುತ್ತಾರೆ. ಚಾಸಾ–3 ರವರ ಮನೆಯವರು ನಮ್ಮ ತಂದೆಗೆ ಫೋನ್ ಮಾಡಿ ಘಟನೆಯ ವಿಷಯ ತಿಳಿಸಿದರು. ನನ್ನ ತಂದೆ ಸ್ಥಳಕ್ಕೆ 6.30–7.00 ಗಂಟೆಗೆ ಬಂದರು.

5. ಈ ಘಟನೆಯಲ್ಲಿ ನಾನು ಧರಿಸಿದ್ದ ಸ್ವೇಟರ್ ಕೆಳಗಡೆ ಬಿದ್ದು ಹೋಗಿದೆ. ಆರೋಪಿಯ ಚಪ್ಪಲಿಗಳು ಬಿದ್ದು ಹೋಗಿದ್ದವು. ಆರೋಪಿಯ ಬೈಕ್ ಅಲ್ಲಿಯೇ ಇತ್ತು. ಆರೋಪಿ ಚಾಸಾ–4 ರವರಿಗೆ ಮಾತನಾಡಿಸಿ ಕೆಣಕಿದ. ಚಾಸಾ–4 ಆರೋಪಿಗೆ ಮಾತನಾಡಿಸಬೇಡ ಎಂದು ಹೇಳಿದರು. ಘಟನೆಯ ವಿಷಯವನ್ನು ನನ್ನ ತಂದೆ ತಾಯಿಗೆ ತಿಳಿಸಿರುತ್ತೇನೆ. ನನ್ನ ತಂದೆ ದೂರು ಕೊಟ್ಟಿರುತ್ತಾರೆ.

6. ದೂರುಕೊಟ್ಟ ಮಾರನೇ ದಿನ ಪೊಲೀಸರು ಸ್ಥಳಕ್ಕೆ ಬಂದು ಮಹಜರ್ ಮಾಡಿ, ಫೋಟೋ ತೆಗೆದಿರುತ್ತಾರೆ. ಪೊಲೀಸರು ಚಪ್ಪಲಿಮತ್ತು ಸ್ವೆಟರನ್ನು ಜಪ್ತಿ ಮಾಡಿರುತ್ತಾರೆ. ಮಹಜರ್ ಮತ್ತು ನಕಾಶೆಯಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-2 ಮತ್ತು 3 ಎಂದು ಸಾಕ್ಷಿಯ ಸಹಿಗಳನ್ನು ನಿಪಿ–2(ಎ) ನಿಪಿ–2(ಬಿ) ಮತ್ತು 3(ಎ) ಎಂದು ಗುರುತಿಸಲಾಯಿತು. ಮಹಜರನ್ನು ಬೆಳಿಗ್ಗೆ 11.30 ರಿಂದ 1.00 ಗಂಟೆಯವರೆಗೂ ಮಾಡಲಾಯಿತು.

7. ತನಿಖಾಧಿಕಾರಿ ಜಪ್ತು ಮಾಲುಗಳನ್ನು ಸೀಲು ಮತ್ತು ಪ್ಯಾಕ್ ಮುಖಾಂತರ ಹಾಜರು ಪಡಿಸಿದ್ದು. ಅವುಗಳನ್ನು ಮಾನ್ಯ ಸ.ಅ ರವರ ಸಮಕ್ಷಮ ಮತ್ತು ಆರೋಪಿಯ ಸಮಕ್ಷಮ ತೆಗೆದು ಗುರುತಿಸಲಾಯಿತು. ಸಾಕ್ಷಿಯ ಸ್ವೆಟರ್ ನ್ನು ಮುಮಾ–1, ಒಂದು ಜೊತೆ ಚಪ್ಪಲಿಯನ್ನು ಒಟ್ಟಿಗೆ ಮುಮಾ–2 ಎಂದು ಗುರುತಿಸಲಾಯಿತು. ಬೈಕನ್ನು ಹಾಜರುಪಡಿಸಿದ್ದು, ಸಾಕ್ಷಿ ನೋಡಿ ಗುರುತಿಸಿದ್ದು, ಅದನು ಮುಮಾ–3 ಎಂದು ಗುರುತಿಸಲಾಯಿತು.

8. ಪೊಲೀಸರು ನನ್ನನ್ನು ಸಾಕ್ಷಿ ಹೇಳಿಕೆ ಕಲಂ 164 ಸಿ ಆರ್ ಪಿ ಸಿ ಯಡಿಯಲ್ಲಿ ಕೊಡಲು ಆಲೂರು ನ್ಯಾಯಾಲಯಕ್ಕೆ ಕರೆದುಕೊಂಡು

ಹೋಗಿದ್ದರು. ಅಲ್ಲಿ ಘಟನೆಯ ವಿಷಯವನ್ನು ನ್ಯಾಯಾಧೀಶರ ಮುಂದೆ ಹೇಳಿರುತ್ತೇನೆ. ಆರೋಪಿಗೆ ನನ್ನದು ಯಾವುದು ಜಾತಿ ಅಂತಾ ಅವರಿಗೆ ಗೊತ್ತಿಲ್ಲ. ಸಾಕ್ಷಿ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಹೆಚ್ ಆರ್ ಕೆ ವಕೀಲರಿಂದಃ

ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ವೇಳೆ ಕೇಳಿದ್ದು, ಖರ್ಚಿನೊಂದಿಗೆ ವೇಳೆ ಕೊಡಲಾಯಿತು.

(ನನ್ನ ಉಕ್ತಲೇಖನಕಲ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಅಪರ ಸೆಷನ್ಸ್ ಮತ್ತು ವಿಶೇಷ
ನ್ಯಾಯಾಧೀಶರು, ಹಾಸನ.